**OS.No.**13/2019
**ಡಿ ಡಬ್ಲ್ಯೂಃ1**

**ದಿಃ 15-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ವೈ.ಎಂ ಆರ್ ವಕೀಲರಿಂದ**

ನಾನು ಮೈಸೂರಿನಲ್ಲಿ ಜ್ಞಾನಗಂಗಾ ಗೃಹ ನಿರ್ಮಾಣದಲ್ಲಿ ಒಂದು ನಿವೇಶನವನ್ನು ಖರೀದಿಸಲು ಹಣವನ್ನು ಪಾವತಿಸುತ್ತಿದ್ದೆ ಎಂದರೆ ಸರಿ. ಈಗ ತೋರಿಸಿದ ದಾಖಲೆ ಹಣ ಪಾವತಿಸಿದ ಬಗ್ಗೆ ರಸೀದಿಗಳು ಎಂದರೆ ಸರಿ. ಸದರಿ ರಸೀದಿಗಳನ್ನು **ನಿಪಿ.15 ಮತ್ತು 16** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯಲ್ಲಿ ಇರುವ ಹೆಸರುಗಳು ನಮ್ಮ ಕುಟುಂಬದ ಸದಸ್ಯರ ಹೆಸರುಗಳು ಎಂದರೆ ಸರಿ. ಸದರಿ ದಾಖಲೆಯನ್ನು **ನಿಪಿ.17** ಎಂದು ಗುರುತಿಸಲಾಯಿತು. ಸದಾಶಿವಪ್ಪ ಬಿನ್ ವಿ ಹೆಚ್ ಶಿವರುದ್ರಪ್ಪ ಎಂದರೆ ನಾನು ಎಂದರೆ ಸರಿ. ಬೆಂಕಿಕೆರೆ ಸ.ನಂ. 29*/3 ರಲ್ಲಿ 1 ಎಕರೆ 20 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಈಗ ತೋರಿಸಿದ ದಾಖಲೆ ಮ್ಯುಟೇಶನ್ ಇರುತ್ತದೆ ಎಂದರೆ ಸರಿ. ಸದರಿ ಮ್ಯುಟೇಶನ್ ನ್ನು **ನಿಪಿ.18** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆ ನನ್ನ ಮಗ ತೇಜಸ್ ವಿ ಎಸ್‌ರವರು ಆಸ್ತಿ ಖರೀದಿಸಿದ ಬಗ್ಗೆ ಇರುವ ಖರೀದಿ ಪತ್ರ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಡ್ನಾಳು ಗ್ರಾಮದ ಸರ್ವೆ ನಂ. 85/3 ರಲ್ಲಿ 1 ಎಕರೆ 17.5 ಗುಂಟೆ ಮತ್ತು 85/6 ರಲ್ಲಿ 1 ಎಕರೆ 17.5 ಗುಂಟೆ ಸರ್ವೆ ನಂಬರ್ ಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಮೊದಲು ಈ ಜಮೀನುಗಳು ಲೋಕೇಶ್ವರಪ್ಪ ಅಲಿಯಾಸ್ ವಿ ಎಸ್ ಲೋಕೇಶ್ ತಂದೆ ವಿ ಎಸ್ ಶಿವರುದ್ರಪ್ಪರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಾಗಮ್ಮ ಎನ್ನುವವರು ಲೋಕೇಶಪ್ಪನ ಹೆಂಡತಿ ಎಂದರೆ ಸರಿ. ಲೋಕೇಶಪ್ಪರವರು ನನ್ನ ಸ್ವಂತ ಸಹೋದರ ಎಂದರೆ ಸರಿ. ಲೋಕೇಶಪ್ಪ ಮತ್ತು ನಾಗಮ್ಮ ಈಗಲೂ ಇರುತ್ತಾರೆ. ಈ ಆಸ್ತಿಗಳು ಲೋಕೇಶಪ್ಪ ಮತ್ತು ನಾಗಮ್ಮರವರಿಗೆ ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ. ಈ ಆಸ್ತಿಗಳು ಸಹ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಎನ್ ಮೋಹನ್ ಕುಮಾರ್ ಬಿನ್ ಆರ್ ಕೆ ನಾಗೇಂದ್ರಪ್ಪ ಎನ್ನುವವರು ನಮ್ಮ ಊರಿನವರು ಎಂದರೆ ಸರಿ. ಅವರು ನಮಗೆ ವಿಶ್ವಾಸಿಗರು ಇರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಊರ ಮನೆಯವರು ಇರುತ್ತಾರೆ ಎಂದು ನುಡಿಯುತ್ತಾರೆ. ವಿ ಎಸ್ ಲೋಕೇಶ್‌ರವರ ಕಡೆಯಿಂದ ಎನ್ ಮೋಹನ್ ಕುಮಾರ್

ಬಿನ್ ಆರ್ ಕೆ ನಾಗೇಂದ್ರಪ್ಪ ಎನ್ನುವವರಿಗೆ ದಿನಾಂಕ 03.07.2023 ರಂದು ಕ್ರಯ ಪತ್ರ ಸೃಷ್ಟಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಲೋಕೇಶಪ್ಪ ಮತ್ತು ಅವರ ಹೆಂಡತಿ ನಾಗಮ್ಮರವರಿಗೆ ಈ ಖರೀದಿ ಪತ್ರದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣ ಚಾಲ್ತಿಯಲ್ಲಿರುವಾಗ ಈ ವ್ಯವಹಾರ ನಡೆದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಶ್ರೀಮತಿ ವಿ. ಬಿ ಲತಾ ಕೋಂ ಪರಮೇಶ್ವರಪ್ಪರವರು ನನ್ನ ಸೊಸೆ ಇರುತ್ತಾರೆ. ಕೆ ಕಲ್ಲಪ್ಪ ರವರ ಕಡೆಯಿಂದ ಲತಾರವರು ವಡ್ನಾಳು ಗ್ರಾಮದ ನಿವೇಶನ ಸಂಖ್ಯೆ 13 ನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ. 85/6 ಇದು ಲೋಕೇಶಪ್ಪ ತಂದೆ ವಿ ಎಚ್ ಶಿವರುದ್ರಪ್ಪರವರ ಹೆಸರಿನಲ್ಲಿದ್ದು ಇದು ಸಹ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಲೋಕೇಶಪ್ಪರವರು ನಾನು ಹೇಳಿದಂತೆ ನನ್ನ ಮಾತನ್ನು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಸ.ನಂ. 85/3 ಮತ್ತು 85/6 ಲೋಕೇಶಪ್ಪರವರ ಹಿಸ್ಸೆಗೆ ಹೋದ ಬಗ್ಗೆ ಯಾವುದೇ ನೋಂದಾಯಿತ ದಾಖಲೆ ಇಲ್ಲ ಎಂದರೆ 2020 ರಲ್ಲಿ ಪಂಚಾಯಿತಿ ಆದ ಬಗ್ಗೆ ದಾಖಲೆ ಇದ್ದು ಅದನ್ನು ಹೊರತುಪಡಿಸಿ ನೋಂದಾಯಿತ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಪಂಚಾಯಿತಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ.2 ಸದರಿ ಪಂಚಾಯಿತಿ ದಾಖಲೆ ಇರುತ್ತದೆ. 2018-19 ರಲ್ಲಿಯೂ ಸಹ ಸ.ನಂ. 85/3 ಮತ್ತು 85/6 ಗಳು ಎಂ ಆರ್ ನಂ 61/1986-87 ಎಂದು ವಿಭಜನೆ ಆದ ಬಗ್ಗೆ ಪಹಣಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 1986-87 ರಲ್ಲಿ ವಿಭಜನೆ ಆದ ಬಗ್ಗೆ ಯಾವುದಾದರೂ ದಾಖಲೆ ಇರುತ್ತದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1986-87 ರಲ್ಲಾಗಲಿ ಅಥವಾ 2020 ರಲ್ಲಾಗಲಿ ಯಾವುದೇ ವಿಭಜನೆ ಆಗದೇ ಇದ್ದರೂ ಸಹ ನಿಡಿ.2 ನ್ನು ಸೃಷ್ಟಿ ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ಏನು ಇರುತ್ತದೆ ಎಂದರೆ ಆ ದಾಖಲೆಯಲ್ಲಿ ಇರುವುದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಎಂ ಆರ್ **ನಿಪಿ.19** ಎಂದು ಗುರುತಿಸಲಾಯಿತು. ಖಾತೆ ಮಾಡಲು ನಾನೇ ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ಅರ್ಜಿಯ ಮೇರೆಗೆ ಕಂದಾಯ ಇಲಾಖೆಯವರು ಖಾತೆ ಬದಲಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.19 ರ ಪ್ರಕಾರ ಸ.ನಂ.13/3, 13/4, 13/5, 13/8, 16/1ಪಿ-ಪಿ1, 55/ಪಿ1-ಪಿ1,

137/3 ಗಳಿಗೆ ನಮ್ಮ ಹೆಸರು ಜಂಟಿಯಾಗಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 19 ರಂತೆ ಆದ ಮ್ಯುಟೇಶನ್ ನ್ನು ಎಲ್ಲಿಯು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನಮಗೆ ಸಂಬಂಧ ಇಲ್ಲ ಹಾಗೂ ಬೇಡವೇ ಬೇಡ ಎಂದು ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ.

ಖಾನೆಷುಮಾರು ಖಾತೆ ನಂ. 517/505 ಮತ್ತು 604/589 ಯಾರ ಹೆಸರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಅವು ನನ್ನ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಯು ದಾಖಲೆಯನ್ನು ಒಪ್ಪಿದ್ದರಿಂದ **ನಿಪಿ.20** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆ 19.01.2025 ರ ಮತದಾರರ ಪಟ್ಟಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇರುತ್ತದೆ. ಸದರಿ ಮತದಾರರ ಪಟ್ಟಿಯನ್ನು **ನಿಪಿ.21** ಎಂದು, ಸಾಕ್ಷಿಯ ಹೆಸರಿನ ಭಾಗವನ್ನು **ನಿಪಿ.21(ಎ)** ಎಂದು ಗುರುತಿಸಲಾಯಿತು. ನಿಪಿ.21 ರಲ್ಲಿ ತಂದೆಯ ಹೆಸರು ತಪ್ಪು ಇರುತ್ತದೆ ಎಂದು ಎಲ್ಲಿಯು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಈಶ್ವರಪ್ಪ ಅಂತ ಒಬ್ಬ ಸಹೋದರ ಇರುತ್ತಾರೆ. ನಮ್ಮ ತಂದೆ ಮತ್ತು ಈಶ್ವರಪ್ಪರವರು ಒಟ್ಟಿಗೆ ಇದ್ದಾಗ ಕೆಲವು ಆಸ್ತಿಗಳನ್ನು ಈಶ್ವರಪ್ಪರವರ ಹೆಸರಿಗೆ ಇದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತುಮಕೋಸ್‌ನಿಂದ ಮಂಜೂರಾದ ನಿವೇಶನಕ್ಕೂ ಸಹ ನನ್ನ ಹೆಸರಿನ ಮುಂದೆ ನಮ್ಮ ತಂದೆಯ ಹೆಸರು ಶಿವರುದ್ರಪ್ಪ ಎಂದು ಇದೆ ಎಂದರೆ ಸರಿ. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಈಶ್ವರಪ್ಪರವರ ಕುಟುಂಬಕ್ಕೆ ಸೇರಿ ನಾನೇ ಹಿರಿಯ ಮಗ ಎಂದರೆ ಸರಿ. ನಮ್ಮ ತಂದೆಯವರು ಮೃತಪಟ್ಟ ನಂತರ ನಮ್ಮ ಮನೆಯ ಹಿರಿತನವನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರರಾದ ಲೋಕೇಶಪ್ಪ ಮತ್ತು ಜಯಪ್ಪರವರು ಹಿರಿತನ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪನ ಆಸ್ತಿಗಳನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ನಾನು ನನ್ನ ಚಿಕ್ಕಪ್ಪನ ಮನೆತನಕ್ಕೆ ದತ್ತು ಹೋಗಿರುತ್ತೇನೆ, ನಾವು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ನಾನು ಈಶ್ವರಪ್ಪರವರಿಗೆ ದತ್ತು ಮಗ ಇರುತ್ತೇನೆ ಎಂದು ತೋರಿಸಲು ಶಾಲಾ ದಾಖಲಾತಿಯಲ್ಲಾಗಲಿ ಅಥವಾ ಸರ್ಕಾರಿ ದಾಖಲೆಯಲ್ಲಾಗಲಿ ಇಲ್ಲ ಎಂದರೆ ಸರಿ. ವಾದಿಯರಿಗೆ ಮತ್ತು ಇತರೆ ಪ್ರತಿವಾದಿಗಳಿಗೆ ದಾವಾದ ಆಸ್ತಿಗಳಲ್ಲಿ ಸಮ ಪಾಲು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು

ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ಸ.ನಂ. 38/ಪಿ2 ವಿ ಎಸ್ ಯತೀಶ್ವರಪ್ಪ ಬಿನ್ ವಿ ಎಚ್ ಶಿವರುದ್ರಪ್ಪ ಮತ್ತು ವಿ ಎಸ್ ಷಣ್ಮುಖಪ್ಪ ಬಿನ್ ಶಿವರುದ್ರಪ್ಪರವರ ಹೆಸರಿನಲ್ಲಿ ಇದ್ದು ಇದು ಸಹ ಜಂಟಿ ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ತೋರಿಸಿದ ದಾಖಲೆಯಲ್ಲಿ ಈಗ ಹೇಳಿದಂತೆ ಇರುತ್ತದೆ ಎಂದರೆ ಸರಿ. ಸದರಿ ಮ್ಯುಟೇಶನ್ ನ್ನು **ನಿಪಿ.22** ಎಂದು ಗುರುತಿಸಲಾಯಿತು. ಪೌತಿ ಆಧಾರದ ಮೇರೆಗೆ ಷಣ್ಮುಖಪ್ಪರವರ ಹೆಸರಿಗೆ ಪಹಣಿ ಆಗಿರುತ್ತದೆ ಎಂದರೆ ಸರಿ. ಸದರಿ ಪಹಣಿಯನ್ನು **ನಿಪಿ.23** ಎಂದು ಗುರುತಿಸಲಾಯಿತು.

**ಪಾಟೀ ಸವಾಲು:** 3 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದ

3 ಮತ್ತು 7 ನೇ ಪ್ರತಿವಾದಿ ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.